ಆದರೂ ಅವಳು ನನ್ನ ಹುಡುಗಿ!

ಪ್ರೇಮದ ದಿವ್ಯ ಅನುಭೂತಿಯೆಂದರೆ ಇದೇ ಅಲ್ಲವೇ? ಎಂದೂ ಬಾರದವರನ್ನು ಕಳಿಸಿಕೊಡಲು ಒದ್ದಾಡುವುದು. ಸಿಕ್ಕಿಯೇ ಇಲ್ಲದ್ದನ್ನು ಕಳೆದುಕೊಳ್ಳುವ ವೇದನೆಯಲ್ಲಿ ನರಳುವುದು. ಶುರುವೇ ಆಗದ್ದನ್ನು ಮುಗಿಯಲು ಬಿಡೆನೆಂದು ಹಟ ಹಿಡಿಯುವುದು ಹಾಗೂ ಕೈತಪ್ಪಿಹೋದ ಮೇಲೂ ಅದು ನನ್ನದೇ ಎಂದು ನಂಬುವುದು...

"ಏನ್ ಸರ್? ಕನ್ನಡೀಲಿ ಹಳೇ ಹುಡುಗಿಯ ಬಿಂದಿ ಕಾಣ್ತಿದೆಯಾ?"

ವೈಷ್ಣವಿ ಗಿಟಿಗಿಟಿ ನಕ್ಕಳು.

"ಇಲ್ಲ ಮೇಡಂ. ಸುಶೀಲ ಟೀಚರ್ ಮಗಳ ಮುಂಬುಹಲ್ಲು ಕಾಣ್ತಿದೆ."

ನನ್ನ ಯೋಚನೆಗಳ ಸುಳಿವು ಬಿಟ್ಟುಕೊಡುವ ಇಚ್ಛೆಯಿಲ್ಲದೆ ಮಾರುತ್ತರ ನೀಡಿದೆ.

"ಕಂಡರೆ ನೋಡಿಕೋ. ಈಗ ಕನ್ನಡಿಬಿಟ್ಟು ಈಚೆ ಬಾ. ಅದು ಹೆಣ್ಣುಮಕ್ಕಳ ರಂಗಸ್ಥಳ" ಎನ್ನುತ್ತಾ ನನ್ನನ್ನು ಹಿಂದಕ್ಕೆಳೆದು ದರ್ಪಣದ ಮುಂದೆ ತಾನು ಸ್ಥಾಪಿತಳಾದಳು. ಎರಡು ಕವಲಾಗಿ ಸುಳಿಯೊಡೆದು ಪರಸ್ಪರ ಸುತ್ತಿಕೊಂಡಿದ್ದ ಜಡೆಯನ್ನು ಬೆನ್ನಿನಿಂದ ಮುಂದಕ್ಕೆ ವರ್ಗಾಯಿಸಿಕೊಂಡು ಅದರ ಬ್ರಶ್‌ನಂತಹಾ ತುದಿಯನ್ನು ಬಾಚಿಕೊಳ್ಳತೊಡಗಿದಳು. ಬಾಚಿ ಬಾಚಿ ಮತ್ತಷ್ಟು ಚೂಪಾದ ಅದನ್ನು ಹಾವಿನಂತೆ ಸುರುಳಿಸುತ್ತಿ ತಲೆಯ ಹಿಂಭಾಗದ ಇಳಿಜಾರಿನಲ್ಲಿ ಎತ್ತಿ ಮಡಿಚಿಕಟ್ಟಿಕೊಂಡು ಥಟ್ಟನೆ ತಿರುಗಿ ಅಯಾಮ್ ರೆಡಿ! ಎಂದು ಕಣ್ಣುಮಿಟುಕಿಸಿದಳು. ಮೋಟು ಜಡೆಯನ್ನು ಹೀಗೇ ಬಾಚಿ ಬಾಚಿ ಎತ್ತಿಕಟ್ಟಿಕೊಳ್ಳುತ್ತಿದ್ದವಳು ಅಮ್ಮ. ''ನಂಗೆ ಮೊದ್ಲು ಎಷ್ಟು ದಪ್ಪ ಜಡೆಯಿತ್ತು ಗೊತ್ತಾ? ಶಾಲೇಲಿ ಎಲ್ರೂ ನನ್ನ ನೋಡಿ ಹೊಟ್ಟೆಕಿಚ್ಚು ಪಡ್ತಿದ್ರು. ಅದ್ಯಾರ ದೃಷ್ಟಿ ಬಿತ್ತೋ ಏನೋ, ಎಲ್ಲಾ ಉದ್ರಿ ಹಿಂಗಾಯ್ತು'' ಎನ್ನುತ್ತಾ ತನ್ನ ಮೋಟು ಜಡೆಯನ್ನೇ ಹಿಂದೆಂದೋ ಇದ್ದ ದಟ್ಟ ಕೂದಲೆಂಬಂತೆ ನೀವುತ್ತಾ ಬೇಸರಿಸುತ್ತಿದ್ದರೆ, ಉದುರಿ ಹೋಗಿರುವುದು ಹಾಗೂ ಈಗ ಇರುವುದು... ಈ ಎರಡರ ಪ್ರಾಮುಖ್ಯತೆಯೂ ಗೊತ್ತಿಲ್ಲದ ಆರೇಳು ವರ್ಷದ ನಾನು ಅವಳು ಎತ್ತಿಕಟ್ಟಿದ ಜಡೆಯ ಉಂಡೆಯನ್ನು ಮೆಲ್ಲನೆ ಸೋಕಿ ಹೂಂ ಎನ್ನುತ್ತಿದ್ದೆ.

ಆದರೆ 'ಜ್ಯೋತಿ'ಯ ಜಡೆ ಹೀಗಿರಲಿಲ್ಲ. ಅದು ದಟ್ಟ, ನೀಳ. ರಸ್ತೆ ಬದಿಯಲ್ಲಿ ಕಾಯುತ್ತಾ ನಿಂತ ನನ್ನನ್ನು ನೋಡಿಯೂ ನೋಡದಂತೆ ಬೆನ್ನು ಹಾಕಿ ನಡೆಯುತ್ತಿದ್ದವಳ ಬೆನ್ನಿನ ತುಂಬಾ ಲೋಲಕದಂತೆ ನೇತಾಡುತ್ತಾ ನನ್ನನ್ನು ಮತ್ತಷ್ಟು ಮೋಹಕನನ್ನಾಗಿಸುತ್ತಿತ್ತು. ಅದೆಷ್ಟೇ ದೂರದಿಂದ ನೋಡಿದರೂ ಅದು ಅವಳೇ ಎಂದು ಗುರುತು ಹತ್ತುತ್ತಿದ್ದುದೇ ಅವಳ ಆ ನೀಳ ಜಡೆಯಿಂದ. ತುಂಬು ಬೆನ್ನಿನ ಮೇಲೆ ಕಪ್ಪು ಬಿಳಲಿನಂತೆ ಇಳಿಬಿದ್ದ ಜಡೆ, ಕೈಯನ್ನು ಆಚೀಚೆ ಬೀಸದೆ ಮೊಲದಂತೆ ಮುದುರಿಕೊಂಡು ನಡೆಯುವ ಭಂಗಿ ಇವೆಲ್ಲ ಒಂದುಗೂಡಿ ಅವಳೆಂಬ ಚೆಲುವಿಗೆ ಪ್ರತ್ಯೇಕವಾದ ನಿಲುವೊಂದನ್ನು ಕೊಟ್ಟಿದ್ದವು. ಬೆನ್ನು ಹಾಕಿ ನಡೆದಾಗಲೂ ನನಗೆ ತೋರದೆ ಮರೆಮಾಚಿರುವ ಅವಳ ಇನ್ನೊಂದು ಮುಖ ನನ್ನತ್ತಲೇ ನೋಡಿ ಮುಗುಳ್ನಗುತ್ತಿರುವಂತೆ ನಾನು ಪರವಶನಾಗುತ್ತಿದ್ದೆ. ಈಗಲೂ ಅಷ್ಟೆ, ಬಸ್ಸಿನಲ್ಲಿ ಕುಳಿತು ಸಾಗುವಾಗ ಹೊರಗಡೆ ರಸ್ತೆಯಲ್ಲಿ, ಸೆಕೆಂಡಿನ ನೂರೊಂದನೇ ಭಾಗದಲ್ಲಿ ಅವಳು ರಪ್ಪನೆ ಹಾದುಹೋದರೂ ನನಗೆ ತಿಳಿದುಬಿಡುತ್ತದೆ ಅದು ಅವಳೇ ಎಂದು. ಬಹುಶಃ ಈ ಅಂತರಂಗದೊಳಗೆ ಅವಳಷ್ಟು ಗಾಢವಾಗಿ ಇನ್ಯಾವ ರೂಪವೂ ಅಚ್ಚೊತ್ತಲಾರದೇನೋ?

ಯೋಚನೆಗಳ ಹರಿವು ಬತ್ತುವ ಹೊತ್ತಿಗೆ ನಮ್ಮನ್ನು ಹೊತ್ತ ಬಿಎಂಟಿಸಿ ಬಸ್ಸು ಮೆಜೆಸ್ಟಿಕ್ ನಿಲ್ದಾಣ ಪ್ರವೇಶಿಸುತ್ತಿತ್ತು.

★★★

''ಅಯ್ಯೋ... ನೀರಿನ ಬಾಟಲಿ ಮರೆತೇ ಬಿಟ್ಟೆ!''